ಸಿ.ಸಿ .ನಂ.65/2022 ಪಿಡಬ್ಲೂಃ 1

ದಿನಾಂಕಃ 17-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಫಿರ್ಯಾದುದಾರ ಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆ ಎಂದು ಹಾಗೂ ಫಿರ್ಯಾದುದಾರರನ್ನು ಪಿಡಬ್ಲ್ಯೂ-1 ಎಂದು ಪರಗಣೆಸಲಾಗಿದೆ .

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ**

4. ನಾನು ಟ್ರಾವೆಲ್ ಏಜೆನ್ಸಿ ವ್ಯವಹಾರ ಹಾಗೂ ಉಪ ಗುತ್ತಿಗೆಯನ್ನು ಮಾಡುತ್ತಿದ್ದೇನೆ . ಸದರಿ ವ್ಯವಹಾರ ಹಾಗೂ ಉಪ ಗುತ್ತಿಗೆಯನ್ನು ಮಾಡಲು ನನ್ನ ಹತ್ತಿರ ಪರವಾನಿಗೆ ಇದೆ . ಮೆಪಿಲೆ ಹೇಳಿದ ಟ್ರಾವೆಲ್ ಏಜೆನ್ಸಿ ವ್ಯವಹಾರವನ್ನು ನಾನು ಈಗ್ಗೆ ಸುಮಾರು 6 ರಿಂದ 7 ವರ್ಷಗಳಿಂದ ಮಾಡುತ್ತಿದ್ದೇನೆ . ಸದರಿ ಉಪ ಗುತ್ತಿಗೆಯನ್ನು ನನ್ನ 16 ನೇ ವಯಸ್ಸಿನಿಂದ ಮಾಡುತ್ತಾ ಬಂದಿರುತ್ತೇನೆ . ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ . ಆ ರೀತಿ ನಾನು ಆದಾಯ ತೆರಿಗೆ ಪಾವತಿ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ . ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ . ನಾನು ಮಾಡುತ್ತಿರುವ ಮೇಲೆ ಹೇಳಿದ ವ್ಯವಹಾರದ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇವೆ . ನಾನು ಇದೇ ನ್ಯಾಯಾಲಯದಲ್ಲಿ ಗಂಗಾಧರ ರವರ ವಿರುದ್ಧ ಇದೇ ರೀತಿಯ ಫಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿ . ಸದರಿ ಪ್ರಕರಣ ಸಿಸಿ ನಂ. 625/2018 ಎಂದರೆ ಸರಿ .

5. 2020 ನೇ ಇಸವಿಯ ಸಪ್ಟೆಂಬರ ತಿಂಗಳಿನಲ್ಲಿ ನಾನು ಒಟ್ಟೂ ಇಬ್ಬರಿಗೆ ಸಾಲವನ್ನು ಕೊಟ್ಟಿರುತ್ತೇನೆ. ಅವರಲ್ಲಿ ಒಬ್ಬರು ಆರೋಪಿಯಾಗಿದ್ದು ಇನ್ನೊಬ್ಬರು ಅಭಿನಂದನ ಖಾರ್ವಿ ಆಗಿರುತ್ತಾರೆ . ಸದರಿ ಅಭಿನಂದನ ಖಾರ್ವಿಯವರ ವಿರುದ್ಧವೂ ಸಹ ನಾನು ಇದೇ ನ್ಯಾಯಾಲಯದಲ್ಲಿ ಇದೇ ರೀತಿಯ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ . ಈಗ್ಗೆ ಸುಮಾರು 7 ರಿಂದ 8 ವರ್ಷಗಳಿಂದ ಆರೋಪಿ ನನಗೆ ಪರಿಚಯವಿರುತ್ತಾರೆ . ಆರೋಪಿಯು ಮೊದಲೂ ಸಹ ನನ್ನ ಹತ್ತಿರ 2 ರಿಂದ 3 ಬಾರಿ

ಹಣವನ್ನು ಪಡೆದುಕೊಂಡು ವಾಪಸ್ಸು ನೀಡಿರುತ್ತಾರೆ . ಆದ್ದರಿಂದ ನನಗೆ ಅವರ ಮೇಲೆ ವಿಶ್ವಾಸ ಬಂದಿರುತ್ತದೆ . ಆರೋಪಿಯ ಮನೆಯಲ್ಲಿ ಎಷ್ಟು ಜನರು ಇದ್ದಾರೆ ಎಂದು ನನಗೆ ಗೊತ್ತಿಲ್ಲ . ಆ ರೀತಿ ಆರೋಪಿಯು ಹಿಂದೆ ನನ್ನಿಂದ 2 ರಿಂದ 3 ಬಾರಿ ಹಣವನ್ನು ಪಡೆದು ಹಿಂದಿರುಗಿಸಿರುವ ಬಗ್ಗೆ ನನ್ನ ಹತ್ತಿರ ಯಾವುದೇ ಸಾಕ್ಷ್ಯ ಇರುವುದಿಲ್ಲ . ಮೇಲೆ ಹೇಳಿದ ಅಭಿನಂದನ ಖಾರ್ವಿಗೆ ಎರಡುವರೆ ಲಕ್ಷ ರೂಪಾಯಿ ಸಾಲ ನೀಡಿರುತ್ತೇನೆ . ನಾನು ಆರೋಪಿಗೆ ಕೊಟ್ಟಿದ್ದೆನು ಎಂದು ಹೇಳಿದ ಹಣವನ್ನು ನೆಪ್ಟ ಮುಖಾಂತರ ಅಥವಾ ಚೆಕ್ ಮುಖಾಂತರ ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಆರೋಪಿಯು ತನಗೆ ಮೊದಲಿನಿಂದಲೂ ವಿಶ್ವಾಸದಲ್ಲಿ ಇದ್ದ ಕಾರಣ ತಾನು ಅವರಿಗೆ ಮೂರು ಲಕ್ಷ ರೂಪಾಯಿಯನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಎಂದು . ಒಬ್ಬ ವ್ಯಕ್ತಿಗೆ 20 ಸಾವಿರ ರೂಪಾಯಿಗಿಂತ ಹೆಚ್ಚಿನ ಹಣವನ್ನು ನಗದು ರುಾಪದಲ್ಲಿ ಕೊಡುವುದು ಕಾನೂನು ಬಾಹಿರ ಎಂದರೆ ನನಗೆ ಗೊತ್ತಿಲ್ಲ .

6. ನನ್ನ ಪಡಿತರ ಚೀಟಿಯನ್ನು ಈ ಕೇಸಿನಲ್ಲಿ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ನಾನು ಹೇಳಿದ ರೀತಿಯಲ್ಲಿ ನಾನು ಯಾವುದೇ ವ್ಯವಹಾರವನ್ನು ಮಾಡುತ್ತಿಲ್ಲ ಎಂದರೆ ಸರಿಯಲ್ಲ . ನನ್ನ ಮೇಲೆ ಹೇಳಿದ ವ್ಯವಹಾರದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ .

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.